ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-01**

ಸಂಖ್ಯೆ:ಡಿ.ಎಸ್.ಇ.ಆರ್.ಟಿ/ಇವಿಜಿ/1-10ಮೌಲ್ಯಾಂಕನ/2023-24 ದಿನಾಂಕ: 1-7-2023

**ಸುತ್ತೋಲೆ**

2023-24 ನೇ ಶೈಕ್ಷಣಿಕ ಸಾಲಿನಲ್ಲಿ ಕರ್ನಾಟಕ ರಾಜ್ಯ ಪಠ್ಯಕ್ರಮದ ಶಾಲೆಗಳಲ್ಲಿ 1 ನೇ ತರಗತಿಯಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಮೌಲ್ಯಾಂಕನ ನಡೆಸುವ ಸಂಬಂಧ ಉಲ್ಲೇಖ-1 ರ 2023-24 ನೇ ಸಾಲಿನ ವಾರ್ಷಿಕ ಶೈಕ್ಷಣಿಕ ಮಾರ್ಗಸೂಚಿಯಂತೆ ಶಾಲೆಗಳಲ್ಲಿ ಪಠ್ಯವಸ್ತು ಬೋಧನಾ ಕ್ರಮ ಹಾಗೂ ಮೌಲ್ಯಾಂಕನ ಕುರಿತು ವಹಿಸಬೇಕಾದ ಕ್ರಮಗಳನ್ನು ಈ ಮುಂದಿನಂತೆ ಸೂಚಿಸಿ ಪಟ್ಟಿ ಮಾಡಿದೆ.

1. ರಾಜ್ಯದ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ 29/05/2023 ರಿಂದ ಶೈಕ್ಷಣಿಕ ವರ್ಷವು ಪ್ರಾರಂಭವಾಗಿದೆ. 2022-23 ನೇ ಶೈಕ್ಷಣಿಕ ಸಾಲಿನಲ್ಲಿ ಕಲಿಕಾ ಚೇತರಿಕೆ ಉಪಕ್ರಮವನ್ನು ಅಳವಡಿಸಿ ಕಲಿಕಾ ಅಂತರವನ್ನು ಬೆಸೆಯಲು ಪ್ರಯತ್ನಿಸಿದ್ದರೂ, ಮಕ್ಕಳಲ್ಲಿ ಉಳಿದುಕೊಂಡಿರುವ ಕಲಿಕೆಯ ಕೊರತೆಯನ್ನು ಪತ್ತೆ ಮಾಡಿ ಮುಂದಿನ ತರಗತಿಗೆ ಸಜ್ಜುಗೊಳಿಸಲು ಆರಂಭದಲ್ಲಿ ಉಲ್ಲೇಖಿತ ಪತ್ರ - 2 ರಂತೆ ಸೇತುಬಂಧ ಕಾರ್ಯಕ್ರಮವನ್ನು ಜೂನ್ ತಿಂಗಳಿನಲ್ಲಿ ನಡೆಸಲು ತಿಳಿಸಿದೆ. 1 ರಿಂದ 5 ನೇ ತರಗತಿಗಳಿಗೆ ಚಟುವಟಿಕೆ ಪುಸ್ತಕಗಳಲ್ಲಿ ಸೇತುಬಂಧ ಸಾಹಿತ್ಯವನ್ನು ಈಗಾಗಲೇ ಅಳವಡಿಸಲಾಗಿದೆ ಹಾಗೂ 6 ರಿಂದ 10 ನೇ ತರಗತಿಗಳಿಗೆ ಸೇತುಬಂಧ ಸಾಹಿತ್ಯವನ್ನು ಸಿದ್ಧಪಡಿಸಿ DSERT ವೆಬ್ ಸೈಟ್ ನಲ್ಲಿ ಪ್ರಕಟಿಸಲಾಗಿದೆ.
2. ಉಲ್ಲೇಖ-1 ರನ್ವಯ 2023-24 ನೇ ಶೈಕ್ಷಣಿಕ ವರ್ಷದ ಪಾಠ ಹಂಚಿಕೆ ಮಾಡಿಕೊಂಡು, ಕಲಿಕೆಯನ್ನು ಅನುಕೂಲಿಸುತ್ತಾ ರೂಪಣಾತ್ಮಕ ಮೌಲ್ಯಾಂಕನ ಹಾಗೂ ಸಂಕಲನಾತ್ಮಕ ಮೌಲ್ಯಮಾಪನ ಕೈಗೊಂಡು ಮಕ್ಕಳ ಕಲಿಕೆಯ ಪ್ರಗತಿಯನ್ನು ದಾಖಲಿಸಿಕೊಳ್ಳಬೇಕಾಗಿದೆ. ಮಕ್ಕಳ ಕಲಿಕೆಗಾಗಿ ವಾರ್ಷಿಕ ಕ್ರಿಯಾಯೋಜನೆಯನ್ನು ಶಿಕ್ಷಕರು ಅಗತ್ಯ ಪೂರ್ವ ತಯಾರಿಯೊಂದಿಗೆ ರೂಪಿಸಿಕೊಳ್ಳುವುದು.

2023-2024 ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಸೇತುಬಂಧ ಕಾರ್ಯಕ್ರಮ, ರೂಪಣಾತ್ಮಕ ಮೌಲ್ಯಾಂಕನ ಹಾಗೂ ಸಂಕಲನಾತ್ಮಕ ಮೌಲ್ಯಮಾಪನ ನಿರ್ವಹಿಸಬೇಕಾದ ವೇಳಾಪಟ್ಟಿಯನ್ನು ನೀಡಲಾಗಿರುತ್ತದೆ. ಈ ವೇಳಾಪಟ್ಟಿಯಂತೆ ಶಾಲಾ ಹಂತದಲ್ಲಿ ನಿಗದಿತ ಕಾಲಾವಧಿಯೊಳಗೆ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದು.

**1 ರಿಂದ 5 ನೇ ತರಗತಿಗಳಿಗೆ ಮೌಲ್ಯಾಂಕನ ಮತ್ತು ಮೌಲ್ಯಮಾಪನ ನಿರ್ವಹಣೆಯ ವೇಳಾಪಟ್ಟಿ:**

| ವಿವರ | ಅಂಕಗಳು | ಚಟುವಟಿಕೆ ನಿರ್ವಹಿಸಬೇಕಾದ ಅವಧಿ |
|---|---|---|
| **ಸೇತುಬಂಧ ಶಿಕ್ಷಣ:**<br>ಆಯಾ ತರಗತಿಯ ಕಲಿಕಾ ಫಲಗಳ ಸಾಧನೆಗೆ ವಿದ್ಯಾರ್ಥಿಗಳು | ---- | ಜೂನ್ 2023 |

| | | |
|---|---|---|
| ಸಾಧಿಸಿರಲೇಬೇಕಾದ ಹಿಂದಿನ ತರಗತಿಯ ಕಲಿಕಾ ಫಲಗಳನ್ನು ಆಧರಿಸಿ ಸೇತುಬಂಧ ಚಟುವಟಿಕೆಗಳನ್ನು ನಿರ್ವಹಿಸುವುದು.<br>• 1 ನೇ ತರಗತಿಗೆ 30 ದಿವಸಗಳ ವಿದ್ಯಾಪ್ರವೇಶ ಹಾಗೂ 2 ರಿಂದ 10 ನೇ ತರಗತಿಗಳಿಗೆ ಜೂನ್ ಮಾಹೆಯ ಪ್ರಾರಂಭದ ಮೊದಲಲ್ಲಿ 15 ದಿವಸಗಳ ಸೇತುಬಂಧ ಕಾರ್ಯಕ್ರಮ ನಡೆಸಿ ಸಾಫಲ್ಯ ಪರೀಕ್ಷೆಯ ಫಲಿತಗಳ ಆಧಾರದ ಮೇಲೆ ಶೈಕ್ಷಣಿಕ ಯೋಜನೆಯನ್ನು ರೂಪಿಸಿ (SAP) ಪ್ರತಿ ವಿದ್ಯಾರ್ಥಿಯ ವಿಷಯವಾರು ಕಲಿಕಾ ಫಲಗಳ ಸಾಧನೆಗೆ ಕ್ರಮವಹಿಸುವುದು. | | |
| ಮೊದಲನೇ ರೂಪಣಾತ್ಮಕ ಮೌಲ್ಯಾಂಕನ **FA-1:**<br>• 1 ರಿಂದ 3 ನೇ ತರಗತಿಗಳಿಗೆ ವಿಷಯವಾರು ಪ್ರಾರಂಭದ ಶೇ.20 ರಷ್ಟು ಪಠ್ಯವನ್ನು FA-1 ಕ್ಕೆ ಪರಿಗಣಿಸುವುದು.<br>• 4 ಮತ್ತು 5 ನೇ ತರಗತಿಗಳಿಗೆ ವಿಷಯವಾರು ಪ್ರಾರಂಭದ ಶೇ.25 ರಷ್ಟು ಪಠ್ಯವನ್ನು FA-1 ಕ್ಕೆ ಪರಿಗಣಿಸುವುದು.<br>• ಈ ಅವಧಿಯಲ್ಲಿ ನಿರ್ವಹಿಸಿದ ಘಟಕ ಪರೀಕ್ಷೆಗಳು, ಗೃಹಪಾಠಗಳು, ಚಟುವಟಿಕೆ ಪುಸ್ತಕಗಳಲ್ಲಿನ ಚಟುವಟಿಕೆಗಳು ಮತ್ತು ಇತರೆ ಲಿಖಿತ ಮತ್ತು ಮೌಖಿಕ ಚಟುವಟಿಕೆಗಳನ್ನು ಆಧರಿಸಿ, ಗಳಿಸಿದ ಕಲಿಕಾ ಫಲಗಳನ್ನು ಕ್ರೋಢಿಕರಿಸಿ ಒಟ್ಟಾರೆ ಸಾಧನೆಯನ್ನು 15 ಅಂಕಗಳಿಗೆ ಪರಿವರ್ತಿಸುವುದು. | 15 | ಜುಲೈ 2023 |
| ಎರಡನೇ ರೂಪಣಾತ್ಮಕ ಮೌಲ್ಯಾಂಕನ - **FA-2**:<br>• 1 ರಿಂದ 3 ನೇ ತರಗತಿಗಳಿಗೆ FA-1 ರ ನಂತರದ ವಿಷಯವಾರು ಶೇ.30 ರಷ್ಟು ಪಠ್ಯವನ್ನು FA-2 ಕ್ಕೆ ಪರಿಗಣಿಸುವುದು.<br>• 4 ಮತ್ತು 5 ನೇ ತರಗತಿಗಳಿಗೆ FA-1 ರ ನಂತರದ ವಿಷಯವಾರು ಶೇ.25 ರಷ್ಟು ಪಠ್ಯವನ್ನು FA-2 ಕ್ಕೆ ಪರಿಗಣಿಸುವುದು.<br>• ಈ ಅವಧಿಯಲ್ಲಿ ನಿರ್ವಹಿಸಿದ ಘಟಕ ಪರೀಕ್ಷೆಗಳು, ಗೃಹಪಾಠಗಳು, ಚಟುವಟಿಕೆ ಪುಸ್ತಕಗಳಲ್ಲಿನ ಚಟುವಟಿಕೆಗಳು ಮತ್ತು ಇತರೆ ಲಿಖಿತ ಮತ್ತು ಮೌಖಿಕ ಚಟುವಟಿಕೆಗಳನ್ನು ಆಧರಿಸಿ, ಗಳಿಸಿದ ಕಲಿಕಾ ಫಲಗಳನ್ನು ಕ್ರೋಢಿಕರಿಸಿ ಒಟ್ಟಾರೆ ಸಾಧನೆಯನ್ನು 15 ಅಂಕಗಳಿಗೆ ಪರಿವರ್ತಿಸುವುದು. | 15 | ಸೆಪ್ಟೆಂಬರ್ 2023 |

| | | |
|---|---|---|
| **ಮೊದಲನೇ ಸಂಕಲನಾತ್ಮಕ ಮೌಲ್ಯಮಾಪನ SA-1:**<br>• ಆಯಾ ತರಗತಿ ಮತ್ತು ವಿಷಯಕ್ಕೆ ನಿಗದಿ ಪಡಿಸಿದ ಶೇ 50 ರಷ್ಟು ಪಠ್ಯವನ್ನು ಪರಿಗಣಿಸುವುದು.<br>• 30 ಲಿಖಿತ + 20 ಮೌಖಿಕ = 50 ಅಂಕಗಳಿಗೆ ಪರೀಕ್ಷೆ ನಡೆಸಿ, ಇದನ್ನು 20 ಅಂಕಗಳಿಗೆ ಪರಿವರ್ತಿಸುವುದು.<br>• ಇಂಗ್ಲೀಷ್ ಭಾಷೆಗೆ 10 ಲಿಖಿತ+40 ಮೌಖಿಕ=50 ಅಂಕಗಳಿಗೆ ಪರೀಕ್ಷೆ ನಡೆಸಿ, ಇದನ್ನು 20 ಅಂಕಗಳಿಗೆ ಪರಿವರ್ತಿಸುವುದು. | 20 | ಅಕ್ಟೋಬರ್ 2023 |
| **ಮೂರನೇ ರೂಪಣಾತ್ಮಕ ಮೌಲ್ಯಾಂಕನ - FA-3**<br>• 1 ರಿಂದ 3 ನೇ ತರಗತಿಗಳಿಗೆ FA-2 ರ ನಂತರದ ವಿಷಯವಾರು ಶೇ.30 ರಷ್ಟು ಪಠ್ಯವನ್ನು FA-3 ಕ್ಕೆ ಪರಿಗಣಿಸುವುದು.<br>• 4 ಮತ್ತು 5 ನೇ ತರಗತಿಗಳಿಗೆ FA-2 ರ ನಂತರದ ವಿಷಯವಾರು ಶೇ.30 ರಷ್ಟು ಪಠ್ಯವನ್ನು FA-3 ಕ್ಕೆ ಪರಿಗಣಿಸುವುದು.<br>• ಈ ಅವಧಿಯಲ್ಲಿ ನಿರ್ವಹಿಸಿದ ಘಟಕ ಪರೀಕ್ಷೆಗಳು, ಗೃಹಪಾಠಗಳು, ಚಟುವಟಿಕೆ ಪುಸ್ತಕಗಳಲ್ಲಿನ ಚಟುವಟಿಕೆಗಳು ಮತ್ತು ಇತರೆ ಲಿಖಿತ ಮತ್ತು ಮೌಖಿಕ ಚಟುವಟಿಕೆಗಳನ್ನು ಆಧರಿಸಿ, ಗಳಿಸಿದ ಕಲಿಕಾ ಫಲಗಳನ್ನು ಕ್ರೋಢಿಕರಿಸಿ ಒಟ್ಟಾರೆ ಸಾಧನೆಯನ್ನು 15 ಅಂಕಗಳಿಗೆ ಪರಿವರ್ತಿಸುವುದು. | 15 | ಡಿಸೆಂಬರ್ 2023 |
| **ನಾಲ್ಕನೇ ರೂಪಣಾತ್ಮಕ ಮೌಲ್ಯಾಂಕನ FA-4**<br>• 1 ರಿಂದ 3 ನೇ ತರಗತಿಗಳಿಗೆ FA-3 ರ ನಂತರದ ವಿಷಯವಾರು ಶೇ.20 ರಷ್ಟು ಪಠ್ಯವನ್ನು FA-4 ಕ್ಕೆ ಪರಿಗಣಿಸುವುದು.<br>• 4 ಮತ್ತು 5 ನೇ ತರಗತಿಗಳಿಗೆ FA-3 ರ ನಂತರದ ವಿಷಯವಾರು ಶೇ.20 ರಷ್ಟು ಪಠ್ಯವನ್ನು FA-4 ಕ್ಕೆ ಪರಿಗಣಿಸುವುದು.<br>• ಈ ಅವಧಿಯಲ್ಲಿ ನಿರ್ವಹಿಸಿದ ಘಟಕ ಪರೀಕ್ಷೆಗಳು, ಗೃಹಪಾಠಗಳು, ಚಟುವಟಿಕೆ ಪುಸ್ತಕಗಳಲ್ಲಿನ ಚಟುವಟಿಕೆಗಳು ಮತ್ತು ಇತರೆ ಲಿಖಿತ ಮತ್ತು ಮೌಖಿಕ ಚಟುವಟಿಕೆಗಳನ್ನು ಆಧರಿಸಿ, ಗಳಿಸಿದ ಕಲಿಕಾ ಫಲಗಳನ್ನು ಕ್ರೋಢಿಕರಿಸಿ ಒಟ್ಟಾರೆ ಸಾಧನೆಯನ್ನು 15 ಅಂಕಗಳಿಗೆ ಪರಿವರ್ತಿಸುವುದು. | 15 | ಜನವರಿ-ಫೆಬ್ರವರಿ 2024 |

| | | |
|---|---|---|
| **ಎರಡನೇ ಸಂಕಲನಾತ್ಮಕ ಮೌಲ್ಯಮಾಪನ SA-2**<br>• ಆಯಾ ತರಗತಿ ಮತ್ತು ವಿಷಯಕ್ಕೆ ನಿಗದಿ ಪಡಿಸಿದ ಶೇ 50 ರಷ್ಟು ಪಠ್ಯವನ್ನು ಪರಿಗಣಿಸುವುದು.<br>• 30 ಲಿಖಿತ + 20 ಮೌಖಿಕ = 50 ಅಂಕಗಳಿಗೆ ಪರೀಕ್ಷೆ ನಡೆಸಿ, ಇದನ್ನು 20 ಅಂಕಗಳಿಗೆ ಪರಿವರ್ತಿಸುವುದು.<br>• ಇಂಗ್ಲೀಷ್ ಭಾಷೆಗೆ 10 ಲಿಖಿತ+40 ಮೌಖಿಕ=50 ಅಂಕಗಳಿಗೆ ಪರೀಕ್ಷೆ ನಡೆಸಿ, ಇದನ್ನು 20 ಅಂಕಗಳಿಗೆ ಪರಿವರ್ತಿಸುವುದು.<br>• ಆಯಾ ತರಗತಿ ಮತ್ತು ವಿಷಯಕ್ಕೆ ನಿಗದಿಪಡಿಸಿದ SA-1 ರ ಮೌಲ್ಯಮಾಪನಕ್ಕೆ ಪರಿಗಣಿಸಿದ ನಂತರ ಉಳಿದ ಶೇ.50 ರಷ್ಟು ಪಠ್ಯವನ್ನು ಪರಿಗಣಿಸುವುದು. | 20 | ಮಾರ್ಚ್ 2024 |
| **ಫಲಿತಾಂಶ** | ಒಟ್ಟು 100 ಅಂಕಗಳಿಗೆ | ದಿನಾಂಕ: 08-04-2024 ರಂದು ನಡೆಯುವ ಸಮುದಾಯದತ್ತ ಶಾಲೆ ಕಾರ್ಯಕ್ರಮದಲ್ಲಿ ಫಲಿತಾಂಶ ಪ್ರಕಟಿಸುವುದು. |

**6 ರಿಂದ 8ನೇ ತರಗತಿಗಳಿಗೆ ಮೌಲ್ಯಾಂಕನ ಮತ್ತು ಮೌಲ್ಯಮಾಪನ ನಿರ್ವಹಣೆ:**

| ವಿವರ | ಅಂಕಗಳು | ಚಟುವಟಿಕೆ ನಿರ್ವಹಿಸಬೇಕಾದ ಅವಧಿ |
|---|---|---|
| **ಸೇತುಬಂಧ ಶಿಕ್ಷಣ:**<br>• ಆಯಾ ತರಗತಿಯ ಕಲಿಕಾ ಫಲಗಳ ಸಾಧನೆಗೆ ವಿದ್ಯಾರ್ಥಿಗಳು ಸಾಧಿಸಿರಲೇಬೇಕಾದ ಹಿಂದಿನ ತರಗತಿಯ ಕಲಿಕಾ ಫಲಗಳನ್ನು ಆಧರಿಸಿ ಸೇತುಬಂಧ ಚಟುವಟಿಕೆಗಳನ್ನು ನಿರ್ವಹಿಸುವುದು.<br>• ಜೂನ್ ಮಾಹೆಯ ಪ್ರಾರಂಭದ ಮೊದಲಲ್ಲಿ 15 ದಿವಸಗಳ ಸೇತುಬಂಧ ಕಾರ್ಯಕ್ರಮ ನಡೆಸಿ ಸಾಫಲ್ಯ ಪರೀಕ್ಷೆಯ ಫಲಿತಗಳ ಆಧಾರದ | ---- | ಜೂನ್ 2023 |

| | | |
|---|---|---|
| ಮೇಲೆ ಶೈಕ್ಷಣಿಕ ಯೋಜನೆಯನ್ನು ರೂಪಿಸಿ (SAP) ಪ್ರತಿ ವಿದ್ಯಾರ್ಥಿಯ ವಿಷಯವಾರು ಕಲಿಕಾ ಫಲಗಳ ಸಾಧನೆಗೆ ಕ್ರಮವಹಿಸುವುದು. | | |
| ಮೊದಲನೇ ರೂಪಣಾತ್ಮಕ ಮೌಲ್ಯಾಂಕನ **FA-1:**<br>• 6 ರಿಂದ 8 ನೇ ತರಗತಿಗಳಿಗೆ ವಿಷಯವಾರು ಪ್ರಾರಂಭದ ಶೇ.25 ರಷ್ಟು ಪಠ್ಯವನ್ನು FA-1 ಕ್ಕೆ ಪರಿಗಣಿಸುವುದು.<br>• ಈ ಅವಧಿಯಲ್ಲಿ ನಿರ್ವಹಿಸಿದ ಘಟಕ ಪರೀಕ್ಷೆಗಳು, ಗೃಹಪಾಠಗಳು, ಚಟುವಟಿಕೆ ಪುಸ್ತಕಗಳಲ್ಲಿನ ಚಟುವಟಿಕೆಗಳು ಮತ್ತು ಇತರೆ ಲಿಖಿತ ಮತ್ತು ಮೌಖಿಕ ಚಟುವಟಿಕೆಗಳನ್ನು ಆಧರಿಸಿ, ಗಳಿಸಿದ ಕಲಿಕಾ ಫಲಗಳನ್ನು ಕ್ರೋಢಿಕರಿಸಿ ಒಟ್ಟಾರೆ ಸಾಧನೆಯನ್ನು 10 ಅಂಕಗಳಿಗೆ ಪರಿವರ್ತಿಸುವುದು. | 10 | ಜುಲೈ 2023 |
| ಎರಡನೇ ರೂಪಣಾತ್ಮಕ ಮೌಲ್ಯಾಂಕನ – **FA-2:**<br>• 6 ರಿಂದ 8 ನೇ ತರಗತಿಗಳಿಗೆ FA-1 ರ ನಂತರದ ವಿಷಯವಾರು ಶೇ.25 ರಷ್ಟು ಪಠ್ಯವನ್ನು FA-2 ಕ್ಕೆ ಪರಿಗಣಿಸುವುದು.<br>• ಈ ಅವಧಿಯಲ್ಲಿ ನಿರ್ವಹಿಸಿದ ಘಟಕ ಪರೀಕ್ಷೆಗಳು, ಗೃಹಪಾಠಗಳು, ಚಟುವಟಿಕೆ ಪುಸ್ತಕಗಳಲ್ಲಿನ ಚಟುವಟಿಕೆಗಳು ಮತ್ತು ಇತರೆ ಲಿಖಿತ ಮತ್ತು ಮೌಖಿಕ ಚಟುವಟಿಕೆಗಳನ್ನು ಆಧರಿಸಿ, ಗಳಿಸಿದ ಕಲಿಕಾ ಫಲಗಳನ್ನು ಕ್ರೋಢಿಕರಿಸಿ ಒಟ್ಟಾರೆ ಸಾಧನೆಯನ್ನು 10 ಅಂಕಗಳಿಗೆ ಪರಿವರ್ತಿಸುವುದು. | 10 | ಸೆಪ್ಟೆಂಬರ್ 2023 |
| ಮೊದಲನೇ ಸಂಕಲನಾತ್ಮಕ ಮೌಲ್ಯಮಾಪನ – **SA-1**:<br>• ಆಯಾ ತರಗತಿ ಮತ್ತು ವಿಷಯಕ್ಕೆ ನಿಗದಿ ಪಡಿಸಿದ ಶೇ 50 ರಷ್ಟು ಪಠ್ಯವನ್ನು ಪರಿಗಣಿಸುವುದು.<br>• 40 ಲಿಖಿತ + 10 ಮೌಖಿಕ = 50 ಅಂಕಗಳಿಗೆ ಪರೀಕ್ಷೆ ನಡೆಸಿ, ಇದನ್ನು 30 ಅಂಕಗಳಿಗೆ ಪರಿವರ್ತಿಸುವುದು. | 30 | ಅಕ್ಟೋಬರ್ 2023 |
| ಮೂರನೇ ರೂಪಣಾತ್ಮಕ ಮೌಲ್ಯಾಂಕನ **FA-3**<br>• 6 ಮತ್ತು 7 ನೇ ತರಗತಿಗಳಿಗೆ FA-2 ರ ನಂತರದ ವಿಷಯವಾರು ಶೇ.30 ರಷ್ಟು ಪಠ್ಯವನ್ನು FA-3 ಕ್ಕೆ ಪರಿಗಣಿಸುವುದು.<br>• 8 ನೇ ತರಗತಿಗೆ FA-2 ರ ನಂತರದ ವಿಷಯವಾರು ಶೇ.40 ರಷ್ಟು | 10 | ಡಿಸೆಂಬರ್ 2023 |

| | | |
|---|---|---|
| ಪಠ್ಯವನ್ನು FA-3 ಕ್ಕೆ ಪರಿಗಣಿಸುವುದು.<br>• ಈ ಅವಧಿಯಲ್ಲಿ ನಿರ್ವಹಿಸಿದ ಘಟಕ ಪರೀಕ್ಷೆಗಳು, ಗೃಹಪಾಠಗಳು, ಚಟುವಟಿಕೆ ಪುಸ್ತಕಗಳಲ್ಲಿನ ಚಟುವಟಿಕೆಗಳು ಮತ್ತು ಇತರೆ ಲಿಖಿತ ಮತ್ತು ಮೌಖಿಕ ಚಟುವಟಿಕೆಗಳನ್ನು ಆಧರಿಸಿ, ಗಳಿಸಿದ ಕಲಿಕಾ ಫಲಗಳನ್ನು ಕ್ರೋಢಿಕರಿಸಿ ಒಟ್ಟಾರೆ ಸಾಧನೆಯನ್ನು 10 ಅಂಕಗಳಿಗೆ ಪರಿವರ್ತಿಸುವುದು. | | |
| **ನಾಲ್ಕನೇ ರೂಪಣಾತ್ಮಕ ಮೌಲ್ಯಾಂಕನ FA-4**<br>• 6 ಮತ್ತು 7 ನೇ ತರಗತಿಗಳಿಗೆ FA-3 ರ ನಂತರದ ವಿಷಯವಾರು ಶೇ.20 ರಷ್ಟು ಪಠ್ಯವನ್ನು FA-4 ಕ್ಕೆ ಪರಿಗಣಿಸುವುದು.<br>• 8 ನೇ ತರಗತಿಗೆ FA-3 ರ ನಂತರದ ವಿಷಯವಾರು ಶೇ.10 ರಷ್ಟು ಪಠ್ಯವನ್ನು FA-4 ಕ್ಕೆ ಪರಿಗಣಿಸುವುದು.<br>• ಈ ಅವಧಿಯಲ್ಲಿ ನಿರ್ವಹಿಸಿದ ಘಟಕ ಪರೀಕ್ಷೆಗಳು, ಗೃಹಪಾಠಗಳು, ಚಟುವಟಿಕೆ ಪುಸ್ತಕಗಳಲ್ಲಿನ ಚಟುವಟಿಕೆಗಳು ಮತ್ತು ಇತರೆ ಲಿಖಿತ ಮತ್ತು ಮೌಖಿಕ ಚಟುವಟಿಕೆಗಳನ್ನು ಆಧರಿಸಿ, ಗಳಿಸಿದ ಕಲಿಕಾ ಫಲಗಳನ್ನು ಕ್ರೋಢಿಕರಿಸಿ ಒಟ್ಟಾರೆ ಸಾಧನೆಯನ್ನು 10 ಅಂಕಗಳಿಗೆ ಪರಿವರ್ತಿಸುವುದು. | 10 | ಫೆಬ್ರವರಿ 2024 |
| **ಎರಡನೇ ಸಂಕಲನಾತ್ಮಕ ಮೌಲ್ಯಮಾಪನ SA-2**<br>• ಆಯಾ ತರಗತಿ ಮತ್ತು ವಿಷಯಕ್ಕೆ ನಿಗದಿ ಪಡಿಸಿದ ಶೇ 50 ರಷ್ಟು ಪಠ್ಯವನ್ನು ಪರಿಗಣಿಸುವುದು.<br>• 40 ಲಿಖಿತ + 10 ಮೌಖಿಕ = 50 ಅಂಕಗಳಿಗೆ ಪರೀಕ್ಷೆ ನಡೆಸಿ, ಇದನ್ನು 30 ಅಂಕಗಳಿಗೆ ಪರಿವರ್ತಿಸುವುದು.<br>• ಇಂಗ್ಲೀಷ್ ಭಾಷೆಗೆ 10 ಲಿಖಿತ+40 ಮೌಖಿಕ=50 ಅಂಕಗಳಿಗೆ ಪರೀಕ್ಷೆ ನಡೆಸಿ, ಇದನ್ನು 20 ಅಂಕಗಳಿಗೆ ಪರಿವರ್ತಿಸುವುದು.<br>• ಆಯಾ ತರಗತಿ ಮತ್ತು ವಿಷಯಕ್ಕೆ ನಿಗದಿಪಡಿಸಿದ SA-1 ರ ಮೌಲ್ಯಮಾಪನಕ್ಕೆ ಪರಿಗಣಿಸಿದ ನಂತರದ ಉಳಿದ ಶೇ.50 ರಷ್ಟು ಪಠ್ಯವನ್ನು ಪರಿಗಣಿಸುವುದು. | 30 | ಮಾರ್ಚ್ 2024 |
| **ಫಲಿತಾಂಶ** | ಒಟ್ಟು 100 ಅಂಕಗಳಿಗೆ | ದಿನಾಂಕ:08-04-2024 ರಂದು ನಡೆಯುವ ಸಮುದಾಯದತ್ತ ಶಾಲೆ ಕಾರ್ಯಕ್ರಮದಲ್ಲಿ ಫಲಿತಾಂಶ ಪ್ರಕಟಿಸುವುದು. |

**9 & 10 ನೇ ತರಗತಿಗಳಿಗೆ ಮೌಲ್ಯಾಂಕನ ನಿರ್ವಹಣೆ ವೇಳಾಪಟ್ಟಿ:**

| ವಿವರ | ಅಂಕಗಳು | ಚಟುವಟಿಕೆ ನಿರ್ವಹಿಸಬೇಕಾದ ಅವಧಿ |
|---|---|---|
| ಸೇತುಬಂಧ ಶಿಕ್ಷಣ:<br>• ಆಯಾ ತರಗತಿಯ ಕಲಿಕಾ ಫಲಗಳ ಸಾಧನೆಗೆ ವಿದ್ಯಾರ್ಥಿಗಳು ಸಾಧಿಸಿರಲೇಬೇಕಾದ ಹಿಂದಿನ ತರಗತಿಯ ಕಲಿಕಾ ಫಲಗಳನ್ನು ಆಧರಿಸಿ ಸೇತುಬಂಧ ಚಟುವಟಿಕೆಗಳನ್ನು ನಿರ್ವಹಿಸುವುದು.<br>• ಜೂನ್ ಮಾಹೆಯ ಪ್ರಾರಂಭದ ಮೊದಲಲ್ಲಿ 15 ದಿವಸಗಳ ಸೇತುಬಂಧ ಕಾರ್ಯಕ್ರಮ ನಡೆಸಿ ಸಾಫಲ್ಯ ಪರೀಕ್ಷೆಯ ಫಲಿತಗಳ ಆಧಾರದ ಮೇಲೆ ಶೈಕ್ಷಣಿಕ ಯೋಜನೆಯನ್ನು ರೂಪಿಸಿ (SAP) ಪ್ರತಿ ವಿದ್ಯಾರ್ಥಿಯ ವಿಷಯವಾರು ಕಲಿಕಾ ಫಲಗಳ ಸಾಧನೆಗೆ ಕ್ರಮವಹಿಸುವುದು. | | ಜೂನ್ 2023 |
| **ಮೊದಲನೇ ರೂಪಣಾತ್ಮಕ ಮೌಲ್ಯಾಂಕನ FA-1**<br>• 2 ಚಟುವಟಿಕೆ/ಯೋಜನೆ -15+15 ಅಂಕಗಳು ಹಾಗೂ 1 ಲಿಖಿತ ಪರೀಕ್ಷೆ-20 ಅಂಕಗಳು.<br>• ಒಟ್ಟಾರೆ ಸಾಧನೆಯನ್ನು 50 ಅಂಕಗಳಿಗೆ ಪರಿಗಣಿಸುವುದು.<br>• FA-1 ಕ್ಕೆ ಆಯಾ ತರಗತಿಗೆ ನಿಗದಿಗೊಳಿಸಿದ, ವಿಷಯವಾರು ಪಠ್ಯದ ಆರಂಭದ ಶೇ.25 ರಷ್ಟು ಪಠ್ಯವನ್ನು ಪರಿಗಣಿಸುವುದು. | 50 | ಜುಲೈ 2023 |
| **ಎರಡನೇ ರೂಪಣಾತ್ಮಕ ಮೌಲ್ಯಾಂಕನ FA-2**<br>• 2 ಚಟುವಟಿಕೆ/ಯೋಜನೆ -15+15 ಅಂಕಗಳು ಹಾಗೂ 1 ಲಿಖಿತ ಪರೀಕ್ಷೆ-20 ಅಂಕಗಳು.<br>• ಒಟ್ಟಾರೆ ಸಾಧನೆಯನ್ನು 50 ಅಂಕಗಳಿಗೆ ಪರಿಗಣಿಸುವುದು.<br>• FA-2 ಕ್ಕೆ FA-1 ರ ನಂತರದ ವಿಷಯವಾರು ಪಠ್ಯದ ಶೇ.25 ರಷ್ಟು ಪಠ್ಯವನ್ನು ಪರಿಗಣಿಸುವುದು. | 50 | ಸೆಪ್ಟೆಂಬರ್ 2023 |
| **ಮೊದಲನೇ ಸಂಕಲನಾತ್ಮಕ ಮೌಲ್ಯಮಾಪನ - SA-1**<br>• ಆಯಾ ತರಗತಿ ಮತ್ತು ವಿಷಯಕ್ಕೆ ನಿಗದಿ ಪಡಿಸಿದ ಶೇ.50 ರಷ್ಟು ಪಠ್ಯವನ್ನು ಪರಿಗಣಿಸುವುದು.<br>• ಪ್ರಥಮ ಭಾಷೆಗೆ 100 ಅಂಕಗಳು, ದ್ವಿತೀಯ ಮತ್ತು ತೃತೀಯ ಭಾಷೆ ಹಾಗೂ ಕೋರ್ ವಿಷಯಗಳಿಗೆ 80 ಅಂಕಗಳಿಗೆ ಲಿಖಿತ ಪರೀಕ್ಷೆಯನ್ನು | | ಅಕ್ಟೋಬರ್ 2023 |

| | | |
|---|---|---|
| ನಡೆಸುವುದು.<br>• ಎರಡು ರೂಪಣಾತ್ಮಕ ಮೌಲ್ಯಾಂಕನಗಳ (FA 1 + FA 2) ಒಟ್ಟು 100 ಅಂಕಗಳನ್ನು ಪ್ರಥಮ ಭಾಷೆಗೆ 25 ಹಾಗೂ ದ್ವಿತೀಯ ಮತ್ತು ತೃತೀಯ ಭಾಷೆ ಹಾಗೂ ಕೋರ್ ವಿಷಯಗಳಿಗೆ 20 ಅಂಕಗಳಿಗೆ ಪರಿವರ್ತಿಸಿ ಆಂತರಿಕ ಮೌಲ್ಯಮಾಪನಕ್ಕೆ ಪರಿಗಣಿಸುವುದು.<br>• ಪ್ರಥಮ ಭಾಷೆ - 100 ಲಿಖಿತ + 25 ಆಂತರಿಕ = 125 ಅಂಕಗಳು<br>• ದ್ವಿತೀಯ ಮತ್ತು ತೃತೀಯ ಭಾಷೆ ಹಾಗೂ ಕೋರ್ ವಿಷಯಗಳಿಗೆ - 80 ಲಿಖಿತ + 20 ಆಂತರಿಕ = 100 ಅಂಕಗಳಿಗೆ ಮೌಲ್ಯಮಾಪನ ನಡೆಸುವುದು. | 625 ಅಂಕಗಳು | |
| ಮೂರನೇ ರೂಪಣಾತ್ಮಕ ಮೌಲ್ಯಾಂಕನ - **FA -3**<br>• 2 ಚಟುವಟಿಕೆ/ಯೋಜನೆ -15+15 ಅಂಕಗಳು ಹಾಗೂ 1 ಲಿಖಿತ ಪರೀಕ್ಷೆ-20 ಅಂಕಗಳು.<br>• ಒಟ್ಟಾರೆ ಸಾಧನೆಯನ್ನು 50 ಅಂಕಗಳಿಗೆ ಪರಿಗಣಿಸುವುದು.<br>• 9 ನೇ ತರಗತಿಗೆ FA - 3 ಕ್ಕೆ FA-2 ರ ನಂತರದ ವಿಷಯವಾರು ಪಠ್ಯದ ಶೇ 30 ರಷ್ಟನ್ನು ಪರಿಗಣಿಸುವುದು.<br>• 10 ನೇ ತರಗತಿಗೆ FA - 3 ಕ್ಕೆ FA-2 ರ ನಂತರದ ವಿಷಯವಾರು ಪಠ್ಯದ ಶೇ 40 ರಷ್ಟನ್ನು ಪರಿಗಣಿಸುವುದು. | 50 | ಡಿಸೆಂಬರ್ 2023 |
| ನಾಲ್ಕನೇ ರೂಪಣಾತ್ಮಕ ಮೌಲ್ಯಾಂಕನ **FA -4**<br>• 2 ಚಟುವಟಿಕೆ/ಯೋಜನೆ -15+15 ಅಂಕಗಳು ಹಾಗೂ 1 ಲಿಖಿತ ಪರೀಕ್ಷೆ-20 ಅಂಕಗಳು.<br>• ಒಟ್ಟಾರೆ ಸಾಧನೆಯನ್ನು 50 ಅಂಕಗಳಿಗೆ ಪರಿಗಣಿಸುವುದು.<br>• 9 ನೇ ತರಗತಿಗೆ FA - 4 ಕ್ಕೆ FA - 3 ರ ನಂತರದ ವಿಷಯವಾರು ಪಠ್ಯದ ಶೇ 20 ರಷ್ಟನ್ನು ಪರಿಗಣಿಸುವುದು..<br>• 10 ನೇ ತರಗತಿಗೆ FA - 4 ಕ್ಕೆ FA - 3 ರ ನಂತರದ ವಿಷಯವಾರು ಪಠ್ಯದ ಶೇ 10 ರಷ್ಟನ್ನು ಪರಿಗಣಿಸುವುದು. | 50 | ಫೆಬ್ರವರಿ 2024 |

| | | |
|---|---|---|
| **9ನೇ ತರಗತಿಗೆ ಸಂಕಲನಾತ್ಮಕ ಮೌಲ್ಯಮಾಪನ SA-2**<br>**(ಅಂತಿಮ ವಾರ್ಷಿಕ ಪರೀಕ್ಷೆ)**<br>• 9 ನೇ ತರಗತಿಯ ಆಯಾ ಭಾಷೆ ಹಾಗೂ ವಿಷಯಕ್ಕೆ ನಿಗದಿ ಪಡಿಸಿದ ವಾರ್ಷಿಕ ಶೇ.100 ರಷ್ಟು ಪಠ್ಯವನ್ನು ಪರಿಗಣಿಸುವುದು.<br>• ಪ್ರಥಮ ಭಾಷೆಗೆ 100 ಅಂಕಗಳು, ದ್ವಿತೀಯ ಮತ್ತು ತೃತೀಯ ಭಾಷೆ ಹಾಗೂ ಕೋರ್ ವಿಷಯಗಳಿಗೆ 80 ಅಂಕಗಳಿಗೆ ಲಿಖಿತ ಪರೀಕ್ಷೆಯನ್ನು ನಡೆಸುವುದು.<br>• ನಾಲ್ಕು ರೂಪಣಾತ್ಮಕ ಮೌಲ್ಯಾಂಕನಗಳ (FA1+ FA 2+ FA 3+ FA 4) = ಒಟ್ಟು 200 ಅಂಕಗಳನ್ನು ಪ್ರಥಮ ಭಾಷೆಗೆ 25 ಅಂಕಗಳಿಗೆ ಹಾಗೂ ದ್ವಿತೀಯ ಮತ್ತು ತೃತೀಯ ಭಾಷೆ ಹಾಗೂ ಕೋರ್ ವಿಷಯಗಳಿಗೆ 20 ಅಂಕಗಳಿಗೆ ಪರಿವರ್ತಿಸಿ ಆಂತರಿಕ ಮೌಲ್ಯಮಾಪನಕ್ಕೆ ಪರಿಗಣಿಸುವುದು.<br>• ಪ್ರಥಮ ಭಾಷೆ - 100 ಲಿಖಿತ + 25 ಆಂತರಿಕ = 125 ಅಂಕಗಳು<br>• ದ್ವಿತೀಯ ಮತ್ತು ತೃತೀಯ ಭಾಷೆ ಹಾಗೂ ಕೋರ್ ವಿಷಯಗಳಿಗೆ - 80 ಲಿಖಿತ + 20 ಆಂತರಿಕ = 100 ಅಂಕಗಳಿಗೆ ಮೌಲ್ಯಮಾಪನ ನಡೆಸುವುದು.<br>• ಅಂತಿಮ ವಾರ್ಷಿಕ ಪರೀಕ್ಷೆಯ ಅಂಕಗಳನ್ನು ಆಧರಿಸಿ ಫಲಿತಾಂಶವನ್ನು ನಿರ್ಧರಿಸುವುದು. | 625 ಅಂಕಗಳು | ಮಾರ್ಚ್ 2024<br>-<br>ದಿನಾಂಕ: 10-04-2024 ರಂದು ನಡೆಯುವ ಪ್ರೌಢಶಾಲೆಯ ಸಮುದಾಯದತ್ತ ಶಾಲೆ ಕಾರ್ಯಕ್ರಮದಲ್ಲಿ ಪ್ರೌಢಶಾಲೆಯ 8 ಮತ್ತು 9 ನೇ ತರಗತಿಯ ಫಲಿತಾಂಶ ಪ್ರಕಟಿಸುವುದು |
| **10ನೇ ತರಗತಿಗೆ ಪೂರ್ವಸಿದ್ಧತಾ ಪರೀಕ್ಷೆ**<br>• ಪ್ರಥಮ ಭಾಷೆ – 100 ಅಂಕಗಳಿಗೆ ಲಿಖಿತ ಪರೀಕ್ಷೆ ಹಾಗೂ 25 ಅಂಕಗಳ ಆಂತರಿಕ ಮೌಲ್ಯಮಾಪನ ಸೇರಿದಂತೆ ಒಟ್ಟು125 ಅಂಕಗಳಿಗೆ ಪರೀಕ್ಷೆ ನಡೆಸುವುದು.<br>• ದ್ವಿತೀಯ ಮತ್ತು ತೃತೀಯ ಭಾಷೆ ಹಾಗೂ ಕೋರ್ ವಿಷಯಗಳಲ್ಲಿ - 80 ಅಂಕಗಳಿಗೆ ಲಿಖಿತ ಪರೀಕ್ಷೆ ಹಾಗೂ 20 ಅಂಕಗಳ ಆಂತರಿಕ ಮೌಲ್ಯಮಾಪನ ಸೇರಿದಂತೆ = 100 ಅಂಕಗಳಿಗೆ ಪರೀಕ್ಷೆ ನಡೆಸುವುದು. | 625 ಅಂಕಗಳಿಗೆ | |

| | | |
|---|---|---|
| **10 ನೇ ತರಗತಿಗೆ ಅಂತಿಮ ವಾರ್ಷಿಕ ಪರೀಕ್ಷೆ**<br>• ಪ್ರಥಮ ಭಾಷೆಗೆ 100 ಅಂಕಗಳು, ದ್ವಿತೀಯ ಮತ್ತು ತೃತೀಯ ಭಾಷೆ ಹಾಗೂ ಕೋರ್ ವಿಷಯಗಳಿಗೆ 80 ಅಂಕಗಳಿಗೆ ಲಿಖಿತ ಪರೀಕ್ಷೆಯನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಯಿಂದ (KSEAB) ಅಂತಿಮ ವಾರ್ಷಿಕ ಪರೀಕ್ಷೆ ನಡೆಸಲಾಗುವುದು.<br>• ನಾಲ್ಕು ರೂಪಣಾತ್ಮಕ ಮೌಲ್ಯಾಂಕನಗಳ (FA1+ FA 2+ FA 3+ FA 4) = ಒಟ್ಟು 200 ಅಂಕಗಳನ್ನು ಪ್ರಥಮ ಭಾಷೆಗೆ 25 ಅಂಕಗಳಿಗೆ ಹಾಗೂ ದ್ವಿತೀಯ ಮತ್ತು ತೃತೀಯ ಭಾಷೆ ಹಾಗೂ ಕೋರ್ ವಿಷಯಗಳಿಗೆ 20 ಅಂಕಗಳಿಗೆ ಪರಿವರ್ತಿಸಿ ಆಂತರಿಕ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದು.<br>• ಪ್ರಥಮ ಭಾಷೆ - 100 ಲಿಖಿತ + 25 ಆಂತರಿಕ = 125 ಅಂಕಗಳು ದ್ವಿತೀಯ ಮತ್ತು ತೃತೀಯ ಭಾಷೆ ಹಾಗೂ ಕೋರ್‌ವಿಷಯಗಳಿಗೆ - 80 ಲಿಖಿತ + 20 ಆಂತರಿಕ = 100 ಅಂಕಗಳಿಗೆ ಮೌಲ್ಯಮಾಪನ ನಡೆಸುವುದು.<br>• ಅಂತಿಮ ವಾರ್ಷಿಕ ಪರೀಕ್ಷೆಯ ಅಂಕಗಳನ್ನು ಆಧರಿಸಿ ಫಲಿತಾಂಶವನ್ನು ನಿರ್ಧರಿಸುವುದು. | 625 ಅಂಕಗಳಿಗೆ | |

**2023-24 ನೇ ಶೈಕ್ಷಣಿಕ ಸಾಲಿನ 1-10 ನೇ ತರಗತಿಗಳಿಗೆ ರೂಪಣಾತ್ಮಕ ಮೌಲ್ಯಾಂಕನ ಮತ್ತು ಸಂಕಲನಾತ್ಮಕ ಮೌಲ್ಯಮಾಪನ/ವಾರ್ಷಿಕ ಪರೀಕ್ಷೆಗೆ ನಿಗದಿಪಡಿಸಿದ ಶೇಕಡಾವಾರು ಪಠ್ಯಹಂಚಿಕೆ ವಿವರ**

| ಕ್ರ.ಸಂ | ತರಗತಿ | ರೂ.ಮೌ-1 | ರೂ.ಮೌ-2 | ಸಂ.ಮೌ-1 | ರೂ.ಮೌ-3 | ರೂ.ಮೌ-4 | ಸಂ.ಮೌ-2/ ವಾರ್ಷಿಕ ಪರೀಕ್ಷೆ |
|---|---|---|---|---|---|---|---|
| 1 | 1-3 ನೇ ತರಗತಿ | 20 | 30 | 50 | 30 | 20 | 50 |
| 2 | 4 ನೇ ತರಗತಿ | 25 | 25 | 50 | 30 | 20 | 50 |
| 3 | 5ನೇ ತರಗತಿ | 25 | 25 | 50 | 40 | 10 | 50 |
| 4 | 6-7 ನೇ ತರಗತಿ | 25 | 25 | 50 | 30 | 20 | 50 |
| 5 | 8ನೇ ತರಗತಿ | 25 | 25 | 50 | 40 | 10 | 50 |

| | | | | | | | |
|---|---|---|---|---|---|---|---|
| 6 | 9ನೇ ತರಗತಿ | 25 | 25 | 50 | 30 | 20 | 100 |
| 7 | 10 ನೇ ತರಗತಿ | 25 | 25 | 50 | 40 | 10 | 100 |

ಸೂಚನೆಗಳು:

1. ಡಿ.ಎಸ್.ಇ.ಆರ್.ಟಿ ವೆಬ್ ಸೈಟ್ ನಲ್ಲಿ ಅಳವಡಿಸಲಾಗಿರುವ ತರಗತಿವಾರು/ವಿಷಯವಾರು ಸೇತುಬಂಧ ಸಾಹಿತ್ಯವನ್ನು ಬಳಸಿ ಸೇತುಬಂಧ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವುದು.
2. ಮೌಲ್ಯಾಂಕನ ಕಾರ್ಯವನ್ನು ನಿರ್ವಹಿಸಿ ಸಾಂದರ್ಭಿಕವಾಗಿ ಸೃಜನೆಯಾಗುವ ಅಗತ್ಯ ದಾಖಲಾತಿಗಳನ್ನು ಮಕ್ಕಳ ಕೃತಿ ಸಂಪುಟದಲ್ಲಿ ಸಂಗ್ರಹಿಸಿ ಇಡುವುದು.
3. 1 ರಿಂದ 3ನೇ ತರಗತಿಗಳ ನಲಿಕಲಿ ಘಟಕಗಳಲ್ಲಿ ಮೌಲ್ಯಾಂಕನಕ್ಕೆ ಸಂಬಂಧಿಸಿದಂತೆ ಸಮಗ್ರ ಶಿಕ್ಷಣ ಕರ್ನಾಟಕದ ನಲಿಕಲಿ ಕೋಶದ ವತಿಯಿಂದ ನೀಡಿದ ಆದೇಶಗಳಂತೆ ಕ್ರಮವಹಿಸುವುದು.
4. "ಕನಿಷ್ಠ ದಾಖಲೆ ಗರಿಷ್ಠ ಕಲಿಕೆ" ಯನ್ನು ಮನದಲ್ಲಿಟ್ಟುಕೊಂಡು ಕಲಿಕೆಗೆ ಪೂರಕವಾಗಿ ರೂಪಣಾತ್ಮಕ ಚಟುವಟಿಕೆಗಳನ್ನು ನಡೆಸಿ ಮಕ್ಕಳಲ್ಲಿ ಕಲಿಕೆಯಾಗಿರುವುದನ್ನು ಖಾತರಿ ಪಡಿಸಿಕೊಳ್ಳುವುದು.
5. ನಿಗದಿಪಡಿಸಿದ ಸಮಯದಲ್ಲಿ ಮೌಲ್ಯಾಂಕನ ಚಟುವಟಿಕೆಗಳನ್ನು ಕೈಗೊಳ್ಳುವುದು. ಯಾವುದೇ ಕಾರಣದಿಂದ ಮಗು ಆ ಸಮಯಕ್ಕೆ ಅಲಭ್ಯವಾದಲ್ಲಿ ಸಾಂದರ್ಭಿಕವಾಗಿ ನಡೆಸಿ, ಮಕ್ಕಳ ಕೃತಿ ಸಂಪುಟದಲ್ಲಿ ದಾಖಲಿಸಿರುವ ಚಟುವಟಿಕೆಗಳೊಂದಿಗೆ ಸಂಯೋಜನೆ ಮಾಡಿಕೊಂಡು ಆ ಮಗುವಿಗೆ ಮೌಲ್ಯಾಂಕನ ನಡೆಸುವುದು.
6. ವೈಯಕ್ತಿಕ ಅಂಕವಹಿಯನ್ನು ಶಿಕ್ಷಕರು, ಕ್ರೋಢೀಕೃತ ಅಂಕವಹಿಯನ್ನು ಶಾಲೆಯಲ್ಲಿ ನಿರ್ವಹಿಸುವುದು.
7. ಎಲ್ಲಾ ಶಿಕ್ಷಕರು ನಿರ್ವಹಿಸಿದ ವೈಯಕ್ತಿಕ ಅಂಕವಹಿಯನ್ನು ಶಾಲಾ ಮುಖ್ಯಶಿಕ್ಷಕರು ಪರಿಶೀಲಿಸುವುದು. ಶಾಲಾ ಹಂತದಲ್ಲಿ ಕ್ರೋಢೀಕೃತ ಅಂಕವಹಿ ಕಾಲ ಕಾಲಕ್ಕೆ ನಿರ್ವಹಣೆಯಾಗುತ್ತಿರುವುದನ್ನು ಖಾತ್ರಿಪಡಿಸಿಕೊಳ್ಳುವುದು.
8. ವೇಳಾಪಟ್ಟಿಯಂತೆ ಮೌಲ್ಯಾಂಕನ ಪೂರ್ಣಗೊಂಡ 5 ದಿನಗಳ ಒಳಗೆ ಮಕ್ಕಳ ಪ್ರಗತಿಯನ್ನು SATS ನಲ್ಲಿ ಕಡ್ಡಾಯವಾಗಿ ನಮೂದಿಸುವುದು.
9. ಬ್ಲಾಕ್ ಹಂತದಲ್ಲಿ BRC, ECO, BRP,CRP, BIERT ರವರು ಕ್ಲಸ್ಟರ್ ಗಳನ್ನು ಹಂಚಿಕೆ ಮಾಡಿಕೊಂಡು SATS ನಲ್ಲಿ ಪ್ರತಿ ಶಾಲೆಯ ಮೌಲ್ಯಾಂಕನ ದಾಖಲಿಸಿರುವುದನ್ನು ಖಾತ್ರಿ ಪಡಿಸಿಕೊಂಡು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ವರದಿ ಮಾಡುವುದು.
10. ಇದೆ ರೀತಿ ಜಿಲ್ಲಾ ಹಂತದಲ್ಲಿ ಉಪನಿರ್ದೇಶಕರು (ಆಡಳಿತ) ರವರ ಕಛೇರಿಯ EO, DYPC, APC, SI, ಡಯಟ್ ನ ಹಿರಿಯ ಉಪನ್ಯಾಸಕರು ಮತ್ತು ಉಪನ್ಯಾಸಕರು, ಬ್ಲಾಕ್ ಗಳನ್ನು ಹಂಚಿಕೆ ಮಾಡಿಕೊಂಡು ಪ್ರತಿ ಮಾಹೆ ಸಭೆಯಲ್ಲಿ SATS ನಲ್ಲಿ ಪ್ರತಿ ಶಾಲೆಯ ಮೌಲ್ಯಾಂಕನ ದಾಖಲಾಗಿರುವುದನ್ನು ಪರಿಶೀಲಿಸಿ ಉಪನಿರ್ದೇಶಕರು (ಅಭಿವೃದ್ಧಿ) ರವರಿಗೆ ವರದಿ ಮಾಡುವುದು.

11. ಶಾಲಾ ಹಂತದಲ್ಲಿ ಮೌಲ್ಯಾಂಕನ ಪ್ರಕ್ರಿಯೆಗಳನ್ನು ನಡೆಸಲು ಡಯಟ್‌ನ ಪ್ರಾಂಶುಪಾಲರು, ಹಿರಿಯ ಉಪನ್ಯಾಸಕರು, ಉಪನ್ಯಾಸಕರು ಜಿಲ್ಲಾ ಮತ್ತು ಬ್ಲಾಕ್ ಹಂತದ ಮಾಸಿಕ ಸಭೆಗಳಲ್ಲಿ ಶೈಕ್ಷಣಿಕವಾಗಿ ಅಗತ್ಯ ಮಾರ್ಗದರ್ಶನ ನೀಡುವುದು ಹಾಗೂ ತಮ್ಮ ಜಿಲ್ಲೆಯ ಪ್ರಗತಿಯ ಕುರಿತು DSERT ರವರಿಗೆ ವರದಿ ಮಾಡುವುದು.

ಮೇಲಿನ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮೌಲ್ಯಾಂಕನ ಮತ್ತು ಮೌಲ್ಯಮಾಪನ ಕಾರ್ಯವನ್ನು ಕೈಗೊಳ್ಳಲು ಸೂಚಿಸಿದೆ.

ರಾಜ್ಯ ಯೋಜನಾ ನಿರ್ದೇಶಕರು,
ಸಮಗ್ರ ಶಿಕ್ಷಣ ಕರ್ನಾಟಕ

R. 01/07/2023
ಆಯುಕ್ತರು,
ಶಾಲಾ ಶಿಕ್ಷಣ ಇಲಾಖೆ,

ಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಹಾಗೂ ಉಪನಿರ್ದೇಶಕರು (ಅಭಿವೃದ್ಧಿ)ರವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳಿಗೆ ಉಪನಿರ್ದೇಶಕರು (ಆಡಳಿತ) ರವರ ಮೂಲಕ ಅಗತ್ಯ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಶಾಲೆಗಳ ಮುಖ್ಯ ಶಿಕ್ಷಕರಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಅಗತ್ಯ ಕ್ರಮಕ್ಕಾಗಿ

ಪ್ರತಿಯನ್ನು:

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ರವರ ಆಪ್ತ ಕಾರ್ಯದರ್ಶಿರವರಿಗೆ ಕಳುಹಿಸುತ್ತಾ ಮಾನ್ಯ ಸಚಿವರ ಗಮನಕ್ಕೆ ತರಲು ಕೋರಿದೆ.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ರವರಿಗೆ ಗೌರವ ಪೂರ್ವಕವಾಗಿ ಅವಗಾಹನೆಗೆ ಸಲ್ಲಿಸಿದೆ.
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯ ನಿರ್ವಹಾಕ ಅಧಿಕಾರಿಯವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
4. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಧಾರವಾಡ ಆಯುಕ್ತಾಲಯ ಮತ್ತು ಕಲಬುರಗಿ, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ ಆಯುಕ್ತಾಲಯ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
5. ರಾಜ್ಯದ ಎಲ್ಲಾ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ ರವರಿಗೆ ಅನುಪಾಲನೆಗಾಗಿ.
6. ಕಛೇರಿ ಪ್ರತಿ.